**S.C. 20/2022.**

## 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.

**ಸತ್ರ ಮೊಕದ್ದಮೆ ಸಂಖ್ಯೆ: 20/2022.**

| | | | |
|---|---|---|---|
| ಹೆಸರು | : | ಶಾಲಂ ಕೆ | ಫ್ರಾಸಾ-15 |
| ತಂದೆಯ ಹೆಸರು | : | ಖಾದರಗಂಸಿ | ಚಾಸಾ-38 |
| ವಯಸ್ಸು | : | 45 ವರ್ಷ | |
| ಉದ್ಯೋಗ | : | ಹೆಚ್.ಸಿ-1364 | |
| ವಾಸಸ್ಥಳ | : | ಇಳಕಲ್ ಗ್ರಾಮೀಣ ಪೋಲಿಸಠಾಣೆ | |

ದಿನಾಂಕಃ 13-09-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ನಾನು 2017 ರಿಂದ 2022 ರವರೆಗೆ ಇಳಕಲ್ ಗ್ರಾಮೀಣ ಪೋಲಿಸಠಾಣೆಯಲ್ಲಿ ಹೆಚ್.ಸಿ ಅಂತಾ ಕೆಲಸ ಮಾಡಿದ್ದೇನೆ. ನಿಖರವಾದ ದಿನಾಂಕ ಮತ್ತು ತಿಂಗಳು ನೆನಪಿಲ್ಲ.

ದಿನಾಂಕಃ 18-11-2021 ರಂದು ಗುನ್ಹಾ ಸ್ಥಳದ ಪಂಚನಾಮೆ, ಆರೋಪಿತರು ಸಿಮ್ ಮುರಿದು ಒಗೆದ ಜಾಗೆಯ ಪಂಚನಾಮೆ, ಕೊಡಲಿ ಜಪ್ತ ಮಾಡಿದ ಪಂಚನಾಮೆ, ಬಟ್ಟೆ ಜಪ್ತ ಹಾಗೂ ವಾಹನ ಜಪ್ತ ಪಂಚನಾಮೆ, ಆರೋಪಿತರು ಒಳಸಂಚು ರೂಪಿಸಿದ ಜಾಗೆಯ ಪಂಚನಾಮೆ, ಶವ ಒಗೆದ ಜಾಗೆಯ ಪಂಚನಾಮೆಗಳನ್ನು ಮಾಡಿದ ಬಗ್ಗೆ ಪೋಟೋ ತೆಗೆದಿದ್ದೇನೆ. ಯಾವ ಯಾವ ಸಮಯದಲ್ಲಿ ಪಂಚನಾಮೆಗಳನ್ನು ಮಾಡಿದ್ದಾರೆ ನೆನಪಿಲ್ಲ. ನನ್ನ ಮೊಬೈಲನಲ್ಲಿ 30 ಪೋಟೋಗಳನ್ನು ತೆಗೆದಿದ್ದೇನೆ. ಅವುಗಳನ್ನು ಪ್ರಿಂಟ್ ಹಾಕಿಸಿ ಸಿ.ಪಿ.ಐ ರವರಿಗೆ ಕೊಟ್ಟಿದ್ದೇನೆ. ಅದನ್ನು ಯಾವ ಲ್ಯಾಬನಲ್ಲಿ ತೆಗೆಸಿದ್ದೇನೆ ಅಂತಾ ಗೊತ್ತಿಲ್ಲ. ಸಾಕ್ಷಿ ಪುನಃ ಹೇಳುವುದೇನೆಂದರೆ ಕಮಲ ಲ್ಯಾಬನಲ್ಲಿ ತೆಗೆಸಿದ್ದೇನೆ. ಆರೋಪಿತರ ಸ್ವಖುಷಿ ಹೇಳಿಕೆಗಳನ್ನು ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ಸಿಡಿ ಮಾಡಿ ಡಿ.ವ್ಹಿ.ಡಿಯಲ್ಲಿ ಹಾಕಿ ಸಿ.ಪಿ.ಐ ರವರಿಗೆ ಕೊಟ್ಟಿದ್ದೇನೆ. ಆ ಬಗ್ಗೆ ಕಲಂ 65(ಬಿ) ಪ್ರಮಾಣಪತ್ರ ನೀಡಿದ್ದೇನೆ. ಅದನ್ನು ನಿಪಿ-29 ಅಂತಾ, ಸಹಿಯನ್ನು ನಿಪಿ-29(ಎ) ಅಂತಾ ಗುರುತಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ.ಎ.ಬಿ.ಜೆ ವಕೀಲರಿಂದ.**

ಪಂಚನಾಮೆಗೆ ಸಿ.ಪಿ.ಐ ರವರು ನೋಟಿಸು ನೀಡಿಲ್ಲ, ಮೌಖಿಕ ಆದೇಶ ಮಾಡಿದ್ದರು. ದಿನಾಂಕಃ 18-11-2021 ರಂದು ಗುನ್ಹಾ ಸ್ಥಳದ ಪಂಚನಾಮೆ, ಆರೋಪಿತರು ಸಿಮ್ ಮುರಿದು ಒಗೆದ ಜಾಗೆಯ ಪಂಚನಾಮೆ, ಕೊಡಲಿ ಜಪ್ತ ಮಾಡಿದ ಪಂಚನಾಮೆ, ಬಟ್ಟೆ ಜಪ್ತ ಹಾಗೂ ವಾಹನ ಜಪ್ತ ಪಂಚನಾಮೆ, ಆರೋಪಿತರು ಒಳಸಂಚು ರೂಪಿಸಿದ ಜಾಗೆಯ ಪಂಚನಾಮೆ, ಶವ ಒಗೆದ ಜಾಗೆಯ ಪಂಚನಾಮೆಗಳನ್ನು ಮಾಡಿದ ಸ್ಥಳದ ಚಕಬಂದಿ ಹಾಗೂ ಸಮಯ ನನಗೆ ಹೇಳಲು ಬರುವುದಿಲ್ಲ.

ಕೊಡಲಿ ಜಪ್ತ ಮಾಡಿದ್ದು ಅದಕ್ಕೆ ರಕ್ತದ ಕಲೆ ಇರಲಿಲ್ಲ, ಏಕೆಂದರೆ ಅದು ನೀರಲ್ಲಿ ಬಿದ್ದಿತ್ತು. ಬಟ್ಟೆಗಳಿಗೆ ರಕ್ತದ ಕಲೆ ಇರಲಿಲ್ಲ. ನನ್ನ ಮೊಬೈಲ್ ರೆಡ್ಮಿ ನೋಟ್-9 ಇರುತ್ತದೆ. ನಿಪಿ-29 ರ ಕಲಂ 65(ಬಿ) ಪ್ರಮಾಣಪತ್ರದಲ್ಲಿ ನನ್ನ ಮೊಬೈಲ್ ರೆಡ್ಮಿ ನೋಟ್-9 ರಲ್ಲಿ ಪೋಟೋ ತೆಗೆದಿದ್ದೇನೆ ಎಂದು ನಮೂದಿಸಿಲ್ಲ ಹಾಗೂ ಕಮಲ ಲ್ಯಾಬನಲ್ಲಿ ಪ್ರಿಂಟ್ ತೆಗೆದ ಬಗ್ಗೆ ನಮೂದಿಸಿಲ್ಲ ಎನ್ನುವುದು ನಿಜ. ನಿಪಿ-29 ರಲ್ಲಿ ನನ್ನ ಮೊಬೈಲ್ ರೆಡ್ಮಿ ನೋಟ್-9 ನಿಂದ ಪೋಟೋ ತೆಗೆದಿದ್ದು ಅದು ಸುಸ್ಥಿತಿಯಲ್ಲಿದ್ದು ಹಾಗೂ ಅದನ್ನು ಆಪರೇಟ್ ಮಾಡುವ ಬೌದ್ದಿಕತೆ ಇದೆ ಎಂದು ನಮೂದಿಸಿಲ್ಲ.

ದಿನಾಂಕಃ 18-11-2021 ರಂದು ಗುನ್ಹಾ ಸ್ಥಳದ ಪಂಚನಾಮೆ, ಆರೋಪಿತರು ಸಿಮ್ ಮುರಿದು ಒಗೆದ ಜಾಗೆಯ ಪಂಚನಾಮೆ, ಕೊಡಲಿ ಜಪ್ತ ಮಾಡಿದ ಪಂಚನಾಮೆ, ಬಟ್ಟೆ ಜಪ್ತ ಹಾಗೂ ವಾಹನ ಜಪ್ತ ಪಂಚನಾಮೆ, ಆರೋಪಿತರು ಒಳಸಂಚು ರೂಪಿಸಿದ ಜಾಗೆಯ ಪಂಚನಾಮೆ, ಶವ ಒಗೆದ ಜಾಗೆಯ ಪಂಚನಾಮೆಗಳನ್ನು ಮಾಡುವ ಕಾಲಕ್ಕೆ ಪೋಟೋ ತೆಗೆದಿಲ್ಲ ಎನ್ನುವುದು ಸರಿಯಲ್ಲ. ತನಿಖಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರ ಸ್ವಖುಷಿ ಹೇಳಿಕೆಗಳನ್ನು ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ಸಿಡಿ ಮಾಡಿ

ಡಿ.ವ್ಹಿ.ಡಿಯಲ್ಲಿ ಹಾಕಿ ಸಿ.ಪಿ.ಐ ರವರಿಗೆ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

13-09-2024
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.